## ಛಾಯಾಚಿತ್ರ ಪ್ರದರ್ಶನ

ಬೆಂಗಳೂರಿನ ಯೂಥ್ ಫೋಟೊಗ್ರಾಫಿಕ್ ಸೊಸೈಟಿಯು ರಾಷ್ಟ್ರೀಯ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ. 18 ವರ್ಷದ ಒಳಗಿನವರಿಗೆ ಭಾಗವಹಿಸಲು ಅವಕಾಶವಿದೆ. 6 ವಿಭಾಗಗಳಡಿ ಆಯ್ಕೆಗೊಂಡ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ₹1.5 ಲಕ್ಷಗಳ ನಗದು ಬಹುಮಾನ, ಪದಕಗಳು ಹಾಗೂ ಗೌರವಾನ್ವಿತ ರಿಬ್ಬನ್‌ಗಳನ್ನೂ ಗೆಲ್ಲಬಹುದು. ಭಾರತದ ಎಲ್ಲಾ ಹವ್ಯಾಸಿ ಹಾಗೂ ವೃತ್ತಿಪರ ಛಾಯಾಚಿತ್ರಗ್ರಾಹಕರು ಭಾಗವಹಿಸಬಹುದು. ಕೊನೆಯ ದಿನಾಂಕ: ಜುಲೈ 20 ಹೆಚ್ಚಿನ ವಿವರಗಳಿಗಾಗಿ: https://salon.ypsbengaluru.in ಸಂಪರ್ಕ: 9945336316

### ಕರುಣೆಯ ಕಥನಗಳು

‘ಕರುಣೆಯ ಕಥನಗಳು’ (ಜಿ.ವಿ. ಆನಂದಮೂರ್ತಿ, ಜೂ. 23) ‘ವಿಚಾರ ಲಹರಿ’ ಓದಿದೆ. ನಾವಿಂದು ಅಂದಿನ ಜನಪದ ಕವಿಗಳ, ತತ್ವಕಾರರ, ವಚನಕಾರರ, ದಾಸವರೇಣ್ಯರ ಮತ್ತು ಕುವೆಂಪು, ಜಿ.ಎಸ್.ಎಸ್., ಕಾವ್ಯಾನಂದ ಮುಂತಾದವರ ಹಾಡು–ಕವಿತೆಗಳನ್ನು ಮೆಲುಕು ಹಾಕಬೇಕಿದೆ. ಆ ಪದ್ಯಗಳಲ್ಲಿನ ಮಾನವೀಯತೆ ಮೈಗೂಡಿಸಿಕೊಂಡ, ಬಹುತ್ವವನ್ನು ಗೌರವಿಸಿ, ಭಾವೈಕ್ಯತೆಯ ಭವ್ಯ ಭಾರತ ಕಟ್ಟಬೇಕಿದೆ.

—ಕೊಟ್ರಯ್ಯ ಹಿರೇಮಠ, ಹಗರಿಬೊಮ್ಮನಹಳ್ಳಿ

### ಮಳೆ

‘ಮಳೆ’ (ಚಂಪಕಮಾಲಾ, ಜೂ.30) ‘ವಿಚಾರ ಲಹರಿ’ ಚೆನ್ನಾಗಿದೆ. ‘ಪ್ರಕೃತಿಗೆ ಹತ್ತಿರವಾಗುವುದೆಂದರೆ ಮತ್ತಷ್ಟು ಮಾನವೀಯವಾಗುವುದೇ ಆಗಿದೆ’ ಎಂಬ ಸಾಲು ಸಾಕು, ನಮ್ಮನ್ನು ಮನುಷ್ಯರನ್ನು ಎಚ್ಚರಿಸಲು. ಇತ್ತೀಚೆಗೆ ನಾನು ಓದಿದ ಉತ್ತಮ ಬರಹಗಳಲ್ಲಿ ಇದೂ ಒಂದು.

—ಪ್ರಸನ್ನ ಗಣಪತಿ, ಎ.ಎಚ್., ಬೆಂಗಳೂರು


### ಆ ನಾಲ್ಕು ಜನ

‘ಆ ನಾಲ್ಕು ಜನ’ (ಕಾಂತರಾಜು ಕನಕಪುರ, ಜು. 7) ಚಿಂತನಾಲಹರಿ ತುಂಬಾ ಸುಂದರವಾಗಿ ಮೂಡಿಬಂದಿದೆ. ತಾಜಾ ನಿರೂಪಣೆ, ಕುತೂಹಲ ಹುಟ್ಟಿಸುವ ವಿಷಯವಿಟ್ಟುಕೊಂಡು ಬರೆದಿರುವ ಲೇಖಕರಿಗೆ ಅಭಿನಂದನೆಗಳು.

—ಕುಸುಮಾ ಹೆಗಡೆ, ಕೆ.ಕೆ. ರೆಡ್ಡಿ

ಓದುವುದಕ್ಕೆ ಸರಳ ಎನಿಸುತ್ತದೆ; ಅಷ್ಟೇ ಅರ್ಥಗರ್ಭಿತವಾಗಿದೆ. ಅದನ್ನು ಅನುಭವಿಸಿದಾಗ ಕಷ್ಟ ಗೊತ್ತಾಗುವುದು.

—ತಿಮ್ಮರಾಜು, ದಾವಣಗೆರೆ



### ಹಾದಿ ಒಳಗಲ ಜ್ಯೋತಿ

‘ಹಾದಿ ಒಳಗಲ ಜ್ಯೋತಿ, ಬೀದಿ ಒಳಗಲ ಜ್ಯೋತಿ’ (ಜಿ.ವಿ.ಆನಂದಮೂರ್ತಿ, ಜು.7) ‘ವಿಚಾರ ಲಹರಿ’ ಚೆನ್ನಾಗಿದೆ. ನಮ್ಮ ಸಾಮಾಜಿಕ ನಡಾವಳಿ ರೂಪಿಸುವಲ್ಲಿ ತತ್ವ ಪದಗಳ ಪಾತ್ರ ಏನು ಎಂಬುದನ್ನು ಚೆನ್ನಾಗಿ ವಿವರಿಸಿದ್ದಾರೆ.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

### ನಕ್ಕು ನಕ್ಕು ಸಾಕಾಯ್ತು!

ಜು. 7ರ ಸಂಚಿಕೆಯ ‘ನಕ್ಕುಬಿಡಿ’ ಪುಟದಲ್ಲಿ ಮೈಸೂರಿನ ರಮೇಶ್ ಅವರು ನಗುವಿನ ಅಲೆಯನ್ನೇ ಹರಿಸಿದ್ದಾರೆ. ಓದುತ್ತ ಓದುತ್ತ ತೆರೆದ ಬಾಯಿ ಮುಚ್ಚಲಿಕ್ಕಾಗಲಿಲ್ಲ, ಓದಿದ ಪುಟ ಬಿಡಲಿಕ್ಕಾಗಲಿಲ್ಲ. ಹಾಗೆಂದು ಓದು ಅಪಚನವೇನೂ ಆಗಿಲ್ಲ ಪುಣ್ಯಕ್ಕೆ.

—ಸರ್ವಜಿತ, ಹುಬ್ಬಳ್ಳಿ

### ಮಕ್ಕಳಿಗೆ ವ್ಯಾಕರಣ ಕಲಿಸುವುದು ಹೇಗೆ?

‘ಮಕ್ಕಳಿಗೆ ವ್ಯಾಕರಣ ಕಲಿಸುವುದು ಹೇಗೆ?’ (ಡಿ.ಎನ್. ಶಂಕರ ಭಟ್, ಜೂ. 30) ಬರವಣಿಗೆ ಇಷ್ಟವಾಯಿತು. ಶಾಲೆಗಳು ಈ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ಮಕ್ಕಳ ಬರವಣಿಗೆ ಮತ್ತು ಓದುವ ಕಲೆಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡಬಹುದು.

—ಸ್ಫೂರ್ತಿ ಕೆ.

ಶಾಲೆಯಲ್ಲಿ ಮಕ್ಕಳಿಗೆ ಕಲಿಸುವ ವ್ಯಾಕರಣಕ್ಕೆ ಪೂರಕವಾಗಿ ಸಮಾಜದಲ್ಲಿ ಉತ್ತಮ ಮಾದರಿಗಳ ಕೊರತೆಯಿದೆ. ವರ್ತಮಾನ ಪತ್ರಿಕೆಗಳನ್ನು ಓದಲೂ ಸಮಯವಿರದ ಇಂದಿನ ಧಾವಂತದ ಬದುಕಿನಲ್ಲಿ ಮಕ್ಕಳ ಮೇಲೆ ದೃಶ್ಯಮಾಧ್ಯಮಗಳ ಪಾತ್ರ ಬಹು ದೊಡ್ಡದು. ವಾಕ್ಯಗಳ ರಚನೆ, ಸಂಕ್ಷಿಪ್ತ ವಾಕ್ಯಗಳ ಬಳಕೆಯಿಂದಾಗುವ ಅರ್ಥ ಬದಲಾವಣೆ ಮುಂತಾದವುಗಳನ್ನು ನೋಡಿದಾಗ ವ್ಯಾಕರಣವೇತಕೆ? ಕಲಿತು ಮರೆಯುವುದಕೆ ಎಂದೆನಿಸುವುದು ಸಹಜ.

—ಸತ್ಯವತಿ, ಕುಳಿಹಿತ್ಲು

### ಬ.ಬ.ಗಂ...

‘ಬ.ಬ.ಗಂ...’ (ಸವಿತಾ ಮಾಧವ ಶಾಸ್ತ್ರಿ, ಗುಂಡ್ಲು, ಜೂ. 30) ಓದಿದೆ. ಸದ್ಯ! ದೇವರ ದಯೆ, ನನ್ನ ಹೆಂಡತಿ ಕತೆಗಾರ್ತಿ ಅಲ್ಲ.

—ಶ್ರೀನಿವಾಸರಾಜು, ಬೆಂಗಳೂರು

## ಯಾವುದು ಭಾಷೆ?

‘ಯಾವುದು ಭಾಷೆ? ಮಾತೋ, ಬರಹವೋ?’ ಲೇಖನಕ್ಕೆ ಜು. 14ರ ಸಂಚಿಕೆಯ ‘ಸಮುದ್ರ ಮಥನ’ದಲ್ಲಿ ಎಚ್. ಆರ್. ಲಕ್ಷ್ಮೀನಾರಾಯಣ ಭಟ್ಟರು ಕೇಳಿದ ಪ್ರಶ್ನೆಗಳಿಗೆ ಚುಟುಕಾಗಿ ಕೆಲವು ಉತ್ತರಗಳನ್ನು ಕೊಟ್ಟಿದ್ದೇನೆ:

1. ಬರಹದ ಸಮರ್ಥನೆಯಿಲ್ಲದೆ ಮಾತು ಅರ್ಥಪೂರ್ಣವಾಗಲಾರದಾದರೆ, ಜಗತ್ತಿನಲ್ಲಿರುವ ಸಾವಿರಾರು ಭಾಷೆಗಳಿಗೆ ಇವತ್ತಿಗೂ ಬರಹವಿಲ್ಲವಾದುದರಿಂದ ಅವೆಲ್ಲವೂ ಅರ್ಥಪೂರ್ಣವಲ್ಲ ಎಂದು ಹೇಳಬೇಕಾದೀತು. ನಾಲ್ಕೈದು ಸಾವಿರ ವರ್ಷಗಳಷ್ಟು ಹಿಂದೆ ಯಾವ ಭಾಷೆಗೂ ಬರಹವಿರಲಿಲ್ಲ.

2. ಬರಹ ಒಂದು ಭಾಷೆಯಲ್ಲಿ ಇರಬಹುದು, ಆದರೆ ಅದೇ ಭಾಷೆಯಲ್ಲ. ಕೃತಿಗಳು ಬರಹದ ನೆರವಿಲ್ಲದೆಯೂ ಇರಬಲ್ಲವು. ಜಾನಪದ ಕೃತಿಗಳು, ವೇದಗಳು ಇಂತಹವು.

3. ದೃಷ್ಟಿದೋಷ ಇರುವ ಮಕ್ಕಳು ಮಾತು ಕಲಿಯದಿರುವುದಿಲ್ಲ. ಶ್ರವಣದೋಷ ಇರುವ ಮಕ್ಕಳು ಮಾತು ಕಲಿಯದಿದ್ದರೂ ಅದಕ್ಕೆ ಸಮನಾದ ‘ಸನ್ನೆನುಡಿ’ಯನ್ನು ತಾವಾಗಿಯೇ ಕಲಿಯಬಲ್ಲರು.

4. ಮುಂದೆ ಏನಾಗಬಲ್ಲುದೆಂಬುದನ್ನು ನಾವು ಊಹಿಸಬಲ್ಲೆವಷ್ಟೆ. ನಾನು ಇವತ್ತಿನ ವಿಷಯವನ್ನು ಹೇಳುತ್ತಿದ್ದೇನೆ.

5. ಬದಲಾವಣೆಯೇ ಜೀವಂತಿಕೆಯ ಲಕ್ಷಣ. ನೂರಾರು ವರ್ಷ ಬದಲಾಗದಿರುವುದು ಜೀವಂತವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಲ್ಯಾಟಿನ್ ಈ ರೀತಿ ಬದಲಾಗದಿರುವುದರಿಂದ ಅದನ್ನು ‘ಡೆಡ್ ಲ್ಯಾಂಗ್ವೇಜ್’ ಎನ್ನುತ್ತಾರೆ. ಹಿಂದಿನ ಕಾಲದ ಹೀಬ್ರೂವನ್ನು ಇವತ್ತು ಮಾತಾಗಿ ಬಳಸಲಾಗುತ್ತಿದೆ; ಆದರೆ, ಅದು ಬದಲಾಗುತ್ತಿದೆ ಮತ್ತು ಅದರಲ್ಲಿ ಇವತ್ತು ಹಲವು ಒಳನುಡಿಗಳು ಕಾಣಿಸಿಕೊಳ್ಳುತ್ತಿವೆ. ಸಂಸ್ಕೃತವನ್ನು ಇವತ್ತು ಮಾತನಾಡುವ ಮಂದಿ ಅದನ್ನು ಬದಲಾಗಲು ಬಿಡುತ್ತಾರೆಯೇ? ಹಾಗೆ ಬಿಟ್ಟಲ್ಲಿ ಅದೂ ಪ್ರಾಕೃತ, ಅಪಭ್ರಂಶ ಮೊದಲಾದವುಗಳಾಗಿ ಇನ್ನೊಮ್ಮೆ ಬದಲಾಗಿ ಸಂಸ್ಕೃತ ಸಂಸ್ಕೃತವಾಗಿ ಉಳಿಯಲಾರದು. ಇನ್ನು ವ್ಯಾಕರಣಗಳು ಒಂದಕ್ಕಿಂತ ಒಂದು ಬೇರಾಗಿ ಇರಬಲ್ಲುವು; ಆದರೆ, ಬದ್ಧತೆ, ಸರಳತೆ ಮೊದಲಾದವುಗಳಲ್ಲಿ ಅವು ಒಂದಕ್ಕಿಂತ ಒಂದು ಬೇರಾಗಿರಬಲ್ಲುವು ಎಂದು ಹೇಳಲು ಭಾಷಾವಿಜ್ಞಾನಿಗಳಿಗೆ ಇದುವರೆಗೆ ಯಾವ ಆಧಾರವೂ ದೊರೆತಿಲ್ಲ.

ಈ ವಿಷಯದಲ್ಲಿ ಹೆಚ್ಚಿನ ವಿವರ ‘ಮಾತು ಮತ್ತು ಬರಹಗಳ ನಡುವಿನ ಗೊಂದಲ’ ಎಂಬ ನನ್ನ ಪುಸ್ತಕದಲ್ಲಿದೆ.

—ಡಿ. ಎನ್. ಶಂಕರ ಭಟ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in